**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1048/2022**

| | | | |
|---|---|---|---|
| **ಹೆಸರು** | **:** | **ಶ್ಯಾಮರಾವ** | **ಚಾ.ಸಾ.5** |
| **ತಂದೆಯ ಹೆಸರು** | **:** | **ಭೀಮಶಾ** | **ಪ್ರಾ.ಸಾ.1** |
| **ವಯಸ್ಸು** | **:** | **58 ವರ್ಷ** | **ದಿನಾಂಕಃ 21-03-2024** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ತೇಗಲತಿಪ್ಪಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು 6 ರವರು ನನಗೆ ಗೊತ್ತು. ಪ್ರಾಸಾ-4 ರವರು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

ಈಗ 2 ವರ್ಷಗಳ ಹಿಂದೆ ಬೆಳಗ್ಗೆ 11 ಗುಂಟೆ ಸುಮಾರಿಗೆ ಗಡಿಕೇಶ್ವರ ಕ್ರಾಸ ಹತ್ತಿರದಿಂದ ಹೊಗುತ್ತಿರುವಾಗ ಅಲ್ಲಿ ಪೋಲಿಸರು ನಿಂತಿದ್ದರು. ನಾನು ಪೋಲಿಸರಿಗೆ ಕೇಳಿದಾಗ ಆಟೋ ಪಲ್ಟಿಯಾಗಿದೆ ಆದ್ದರಿಂದ ಪಂಚನಾಮೆಯಲ್ಲಿ ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ. ಆ ಸಮಯಕ್ಕೆ ನಿಪಿ-2 ರ ಭಾವಚಿತ್ರವನ್ನು ಸಹ ಪೋಲಿಸರು ಪಡೆದಿದ್ದಾರೆ. ನಾನು ಸ್ಥಳಕ್ಕೆ ಹೋದಗ ಆಟೋ ಇರಲಿಲ್ಲ. ಸಹಿ ಮಾಡುವ ಸಮಯಕ್ಕೆ ನನ್ನ ಜೊತೆ ಗಡಿಕೇಶ್ವರ ಗ್ರಾಮದ ವ್ಯಕ್ತಿ ಮತ್ತು ಪೋಲಿಸರು ಇದ್ದರು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಜಪ್ತಿ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ಘಟನ ಸ್ಥಳದಿಂದ ಆಟೋ ಸಂಖ್ಯೆ KA 36 A 4520 ನೇದರ ವಾಹನವನ್ನು ಸ್ಥಳದಿಂದ ಪೋಲಿಸ ಠಾಣೆಗೆ ಜಪ್ತಿ ಮಾಡಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್.ಹೆಚ್.ಆರ್. ವಕೀಲರಿಂದಃ-</u>**

ನಾನು ಸಹಿ ಖಾಲಿ ದಾಖಲೆ ಮೇಲೆ ಮಾಡಿದ್ದೇನೆ ಎಂದರೆ ಸರಿ. ಸ್ಥಳದಲ್ಲಿ ಎಷ್ಟು ಸಮಯವಾಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**